ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಬಾಗಲ್ ಕೋಟೆ ಸಿಮೆಂಟ್ ಕಾರ್ಖಾನೆಯಿಂದ ಉಂಟಾಗಿರುವ ಪರಿಸರ ಮಾಲಿನ್ಯ

574 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ, ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆಯಲ್ಲಿರುವ ಸಿಮೆಂಟ್ ಫ್ಯಾಕ್ಟರಿಯಿಂದ ಉದ್ಭವಿಸುವ ಧೂಳನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ, ಕಳೆದ 4-5 ವರ್ಷಗಳಿಂದ ಸದನದಲ್ಲಿ ಚರ್ಚೆ ನಡೆದಿದ್ದರೂ ಈ ವಿಷಯದಲ್ಲಿ ಸರ್ಕಾರದವರು ಈವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು?

ಆ) ಬಾಗಲಕೋಟೆ ಜನರಿಗೆ ಬಹಳ ದುಷ್ಪರಿಣಾಮ ಮಾಡದಂತೆ ಈ ಸಮಸ್ಯೆಯನ್ನು ತಡೆಗಟ್ಟಲು ಸರ್ಕಾರ ಏನಾದರೂ ಸ್ಪಷ್ಟ ಹಾಗೂ ನಿರ್ದಿಷ್ಟ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ.ಪಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ, ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಬಾಗಲಕೋಟೆಯಲ್ಲಿ ಸ್ಥಾಪಿಸವಾಗಿರುವ ಮೆ. ಕನೋರಿಯ ಇಂಡಸ್ಟ್ರೀಸ್ ಲಿಮಿಟೆಡ್ ಕಾರ್ಖಾನೆಯು ದಿನಂಪ್ರತಿ 1000 ಟನ್ನಷ್ಟು ಸಿಮೆಂಟ್ ಉತ್ಪಾದಿಸುತ್ತದೆ. ಉದ್ದಮೆಯು ವಾಯು ಮಾಲಿನ್ಯವನ್ನು ನಿಯಂತ್ರಿಸುವುದಕ್ಕೋಸ್ಕರ ಎಲ್ಲಾ ವಾಯು ಮಾಲಿನ್ಯಕಾರಕ ಉಗಮಗಳಿಗೂ ಧೂಳನ್ನು ನಿಯಂತ್ರಿಸಲು ಉಪಕರಣಗಳನ್ನು ಹಾಗೂ ಚಿಮಣಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗಧಿಪಡಿಸಿರುವಂತೆ ಅಳವಡಿಸಿರುತ್ತದೆ. ಈ ಉಪಕರಣಗಳು ಸಮರ್ಪಕವಾಗಿ ಕೆಲಸಮಾಡುತ್ತಿದ್ದು, ವಾಯು ಮಾಲಿನ್ಯ ಕಾರಕವಾದ ಧೂಳಿನ ಪ್ರಮಾಣವು ಮಂಡಳಿಯು ನಿಗಧಿಪಡಿಸಿರುವ ಗುಣಮಾನಕಕ್ಕೆ ಸಾಮಾನ್ಯವಾಗಿ ಸರಿಹೊಂದುತ್ತದೆ.

ಸದರಿ ಕಾರ್ಖಾನೆಗೆ ಬೇಕಾಗುವ ಕಚ್ಚಾ ಸಾಮಗ್ರಿಯಾದ ಸುಣ್ಣದ ಕಲ್ಲನ್ನು ಬಾಗಲಕೋಟೆ ಸಮೀಪ ಗಣಿಯಿಂದ ಉದ್ದಿಮೆಯು ಹೊರತೆಗೆಯುತ್ತಿದೆ. ಈ ಕಾರ್ಯಾಚರಣೆಯಲ್ಲಿ ಸೆಕೆಂಡರಿ ಬ್ಲಾಸ್ಟಿಂಗ್ ಮಾಡಿದಾಗ ಧೂಳು ಉದ್ಭವಿಸುತ್ತದೆ, ಹಾಗೂ ಸುತ್ತಮುತ್ತ ಜನರ ಆಸ್ತಿಗೆ ಹಾನಿಯುಂಟಾಗಿರುವುದು ತಿಳಿದು ಬಂದಿರುತ್ತದೆ. ಈ ಬಗ್ಗೆ ಈಗಾಗಲೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸೂಕ್ತ ಪರಿಹಾರೋಪಾಯಕ್ಕೆ ಗಣಿ ಮತ್ತು ಭೂಗರ್ಭ ಶಾಸ್ತ್ರ ಇಲಾಖೆಯನ್ನು ಸಂಪರ್ಕಿಸಿದೆ.

ಆ) ಈ ಕಾರ್ಖಾನೆಯ ವಿಸ್ತರಣೆಗೆ ಬಂದಿರುವ ಪ್ರಸ್ತಾಪವನ್ನು ಪರಿಸರ ಇಲಾಖೆಯು ಅಭ್ಯಂತರಿಸಿದೆ ಹಾಗೂ ಪ್ರಸ್ತುತ ಕಾರ್ಖಾನೆಯಿಂದ ಸ್ಥಳೀಯರಿಗೆ ಆಗುತ್ತಿರುವ ದುಷ್ಪರಿಣಾಮಗಳನ್ನು ನಿರ್ದಿಷ್ಟಪಡಿಸಲು ಪರಿಸರ ಅಘಾತ ವರದಿಯನ್ನು ತಯಾರಿಸಿ ಒಪ್ಪಿಸಲು ಆದೇಶಿಸಿದೆ. ಅಲ್ಲದೆ ಗಣೇಗಾರಿಕೆಗೆ ಸಂಬಂಧಿಸಿದಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯನ್ನು ಸಂಪರ್ಕಿಸಿ ಸಮಸ್ಯೆಯನ್ನು ತಡೆಗಟ್ಟುವ ಕುರಿತು ಪರಿಶೀಲಿಸಲಾಗುವುದು.